# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ಸಿ ನಂ. 36/2014**

**ದೋ.ಸಾ. : 11 ಪ್ರಾ.ಸಾ. : 2**

| | | |
|---|---|---|
| ಸಾಕ್ಷಿಯ ಹೆಸರು | : | ಅಯ್ಯಪ್ಪ ಕುಮಾರ |
| ತಂದೆಯ ಹೆಸರು | : | ಕುಮಾರ |
| ವಯಸ್ಸು | : | 44 ವರ್ಷ |
| ಕೆಲಸ | : | ಗುತ್ತಿಗೆದಾರರು. |
| ವಾಸ | : | ರಾಜೀವನಗರ, ಕದ್ರಾ, ಕಾರವಾರ. |

**ದಿನಾಂಕಃ 17-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿನಾಂಕ 15.02.2014 ರಂದು ಪೋಲಿಸರು ನನ್ನನ್ನು ಕದ್ರಾ ಗ್ರಾಮ ಪಂಚಾಯತಿ ವ್ಯಾಪ್ತಿಯ ರಾಜೀವ ನಗರದ ಮೃತ ವೇಲು ಇಲ್ಲನ್ ಗುಡಿ ಇವರ ಮನೆಯ ಪರಿಶೀಲನಾ ಪಂಚನಾಮೆಗೆ ಕರೆಸಿದ್ದರು. ಆ ದಿನ ನಾನು ಸಂಜೆ 5.00 ಗಂಟೆಗೆ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಅಲ್ಲಿಗೆ ಹೋದಾಗ ಚಾಸಾ-10 ಮತ್ತು ಚಾಸಾ-29 ಸ್ಥಳದಲ್ಲಿ ಇದ್ದರು. ಚಾಸಾ-29 ರವರು ಮೃತ ವೇಲುವಿನ ತಮ್ಮನ ಹೆಂಡತಿ. ಮೊದಲಿಗೆ ಚಾಸಾ-29 ರವರು ಮನೆಯ ಬಾಗಿಲು ತೆಗೆದು ಒಳಗೆ ಹೋದರು. ನಂತರ ಪೋಲಿಸರು ನನ್ನನ್ನು ಹಾಗೂ ಚಾಸಾ-10 ರವರನ್ನು ಮನೆಯ ಒಳಗೆ ಕರೆದುಕೊಂಡು ಹೋದರು. ಅಲ್ಲಿ ಪೋಲಿಸರು ಮನೆಯಲ್ಲಿ ಏನಾದರೂ ಕಳ್ಳತನವಾಗಿದೇಯಾ ಎಂದು ಪರಿಶೀಲನೆ ಮಾಡಿದಾಗ ಮನೆಯ ಬೆಡ್ ರೂಮ್ ನ ಬೆಡ್ ಮೇಲೆ ಒಂದು ನೋಕಿಯಾ ಕಂಪನಿಯ ಮೊಬೈಲ್ ಬಿದ್ದಿತ್ತು ಹಾಗೂ ಆ ಮೊಬೈಲ್ ಸುಸ್ಥಿತಿಯಲ್ಲಿ ಇತ್ತು. ಬೆಡ್ ರೂಮ್ ನ ಪಕ್ಕದಲ್ಲಿದ್ದ ಪರ್ಸಿ ಕಲ್ಲಿನ ಮೇಲೆ 3 ಮೊಬೈಲ್ ಗಳು ಇದ್ದವು. ಆದರೆ ಅವುಗಳಲ್ಲಿ ಸಿಮ್ ಕಾರ್ಡ್ಸ ಇರಲಿಲ್ಲ. ಅಲ್ಲಿಯೇ ಇದ್ದ ಕಪಾಟನ್ನು ತೆರೆದಾಗ ಅದರಲ್ಲಿ 4,025/- ರೂಪಾಯಿ ಹಣ ಇತ್ತು, ಹಾಗೂ ಬಂಗಾರದ ಕೆಲವು ಒಡವೆಗಳು ಇದ್ದವು. ನಂತರ ಪೋಲಿಸರು ಅಲ್ಲಿದ್ದ ಹಣವನ್ನು ಹಾಗೂ ಬಂಗಾರದ ಒಡವೆಗಳನ್ನು ಚಾಸಾ-29 ರವರಿಗೆ ನೀಡಿದರು ಹಾಗೂ ಮೊಬೈಲ್ ಗಳನ್ನು ಜಪ್ತುಪಡಿಸಿಕೊಂಡು, ಅವುಗಳನ್ನು ಗುರುತು ಮಾಡಿಕೊಂಡರು. ನಂತರ ಪಂಚನಾಮೆ ಬರೆದು,

ಪಂಚನಾಮೆಗೆ ನನ್ನ ರುಜು ಪಡೆದುಕೊಂಡರು, ಪಂಚನಾಮೆಯನ್ನು ಸಂಜೆ 5.45 ರಿಂದ 6.30 ರವರೆಗೆ ಮಾಡಿದರು. ಸಾಕ್ಷಿಯು ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-20 ಎಂದು, ಸಾಕ್ಷಿಯ ರುಜುವನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಜಪ್ತುಪಡಿಸಿಕೊಂಡ 4 ಮೊಬೈಲ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ 22 ರಿಂದ 25 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ನ್ಯಾಯವಾದಿ ಶ್ರೀ ಎ.ಎ.ಎ ವಕೀಲರಿಂದ**

2. ಪೋಲಿಸರು ಪಂಚನಾಮೆಗೆ ಬರುವಂತೆ ನನಗೆ ಲಿಖಿತವಾಗಿ ಯಾವುದೇ ನೋಟಿಸಲು ನೀಡಿರುವುದಿಲ್ಲ. ಇದೇ ಮೊದಲ ಬಾರಿಗೆ ನನ್ನನ್ನು ಪಂಚನಾಮೆಗೆ ಕರೆದಿದ್ದರು. ಮೃತ ವೇಲು ನನಗೆ ಸುಮಾರು ವರ್ಷಗಳಿಂದ ಪರಿಚಯ. ಮೃತ ವೇಲುವಿನಿಂದ ನಾನು ಬಹಳಷ್ಟು ಸಹಾಯ ಪಡೆದಿದ್ದೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಬರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆಯ ಯಾವ ಪುಟದಲ್ಲಿ ಚೆಕ್ಕು ಬಂದಿಯಲ್ಲಿ ಬರೆದಿದ್ದಾರೆ ಎಂದು ನನಗೆ ನೆನಪಿಲ್ಲ. ಅದೇ ರೀತಿ ಪಂಚನಾಮೆಯಲ್ಲಿ ಚೆಕ್ಕು ಬಂದಿ ಬರೆಯಲಾಗಿದೆ ಎಂದು ಹೇಳಲು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯ ಯಾವ-ಯಾವ ಪ್ಯಾರಾಗ್ರಾಫ ದಲ್ಲಿ ಏನೇನು ಬರೆದಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಜಪ್ತುಪಡಿಸಿಕೊಂಡ ಮೊಬೈಲ್ ಗಳ IMEI ನಂಬರ್ ಗಳು ನನಗೆ ಹೇಳಲು ಆಗುವುದಿಲ್ಲ. ಮು.ಮಾ 22 ರಿಂದ 25 ಮೊಬೈಲ್ ಗಳ ಪೈಕಿ ಯಾವ ಮೊಬೈಲ್ ನಲ್ಲಿ ಸಿಮ್ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಮು.ಮಾ 22 ರಿಂದ 25 ಮೊಬೈಲ್ ಗಳು ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮು.ಮಾ 22 ರಿಂದ 25 ಮೊಬೈಲಗಳನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅವುಗಳ ಮೇಲೆ ನನ್ನ ರುಜು ಇರುವುದಿಲ್ಲ ಎಂದರೆ ಸರಿ. ಪಂಚನಾನಮೆಯನ್ನು ಇದೇ ರೀತಿ ಬರೆಯಬೇಕು ಎಂದು ನಾನು ಪೋಲಿಸರಿಗೆ ಹೇಳಿರುವುದಿಲ್ಲ. ಪಂಚನಾಮೆಯನ್ನು ಪೋಲಿಸರು ಠಾಣೆಯಲ್ಲಿಯೇ ಬರೆದು ತಂದಿದ್ದರು ಎಂದರೆ ಸಾಕ್ಷಿಯು ಸ್ಥಳದಲ್ಲಿಯೇ ಬರೆದಿದ್ದಾರೆ ಎಂದು ನುಡಿಯುತ್ತಾರೆ. ಪೋಲಿಸರು ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯ ಮಾಡಲು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ